Generated by Foxit PDF Creator © Foxit Software
http://www.foxitsoftware.com For evaluation only.

# ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ

## (ಕರ್ನಾಟಕ ಸರ್ಕಾರ ಸ್ವಾಮ್ಯದ ಉದ್ಯಮ)

**ವಿಶ್ವೇಶ್ವರಯ್ಯ ಕೇಂದ್ರ, 12 ನೇ ಮಹಡಿ, ಮುಖ್ಯ ಗೋಪುರ, ಡಾ|| ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು.**

*ಫೋನ್:22864782 ,ಇ-ಮೇಲ್: kmdcblr@yahoo.co.in*

*ವೆಬ್ ಸೈಟ್ : www.kmdc.in*

## ನಿಗಮದ ಯೋಜನೆಗಳು:

### 1) ಸ್ವಾವಲಂಬನ ಮಾರ್ಜಿನ್ ಹಣ ಸಾಲದ ಯೋಜನೆ:

ಸ್ವಾಲಂಬನ ಯೋಜನೆಯಲ್ಲಿ ವಾಣಿಜ್ಯ ಬ್ಯಾಂಕುಗಳು, ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕು ಮತ್ತು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಗಳ ಮುಖಾಂತರ ಜನರು ಕೈಗೊಳ್ಳಬಯಸುವ ಅಥವಾ ಅಭಿವೃದ್ಧಿ ಪಡಿಸಲು ಬಯಸುವ ಯೋಜನೆಗಳು ಅಂದರೆ, ವ್ಯಾಪಾರ, ಗುಡಿಕೈಗಾರಿಕೆ, ಸೇವೆಗಳು, ಕೃಷಿ ಇತ್ಯಾದಿಗಳಿಗೆ ಸಾಲ ಸೌಲಭ್ಯಗಳನ್ನು ಒದಗಿಸಲಾಗುತ್ತದೆ.

**ಅರ್ಹತೆ:**

ಈ ಯೋಜನೆಯಲ್ಲಿ ಸಾಲ ಪಡೆಯಬಯಸುವ ಆರ್ಜಿದಾರರ ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿ ರಬೇಕು. ಆರ್ಜಿದಾರರು ಸರ್ಕಾರದ ಆದೇಶದನ್ವಯ ಮತೀಯ ಅಲ್ಪಸಂಖ್ಯಾತರ ಗುಂಪಿಗೆ ಸೇರಿದವರಾಗಿದ್ದು, ವಾರ್ಷಿಕ ಆದಾಯ ರೂ. 22,000/- ಅಥವಾ ಅದಕ್ಕಿಂತ ಕಡಿಮೆ ಇರಬೇಕು. ಮೂಲಭೂತವಾಗಿ ಆರ್ಜಿದಾರರ ಕೈಗೊಳ್ಳುವ ಯೋಜನೆಯಲ್ಲಿ ಸಾಕಷ್ಟು ಅನುಭವ ಮತ್ತು ಪರಿಣಿತಿ ಹೊಂದಿರಬೇಕು.

**ಮಾರ್ಜಿನ್ ಹಣದ ನೆರವು: (ಹೆಚ್ಚುವರಿ ಹಣ):**

ನಿಗಮವು ಗುರುತಿಸಿದ ಅಲ್ಪಸಂಖ್ಯಾತರ ಅರ್ಜಿಗಳನ್ನು ಸಂಬಂಧಪಟ್ಟ ಬ್ಯಾಂಕುಗಳಿಗೆ ಯೋಜನೆಯ ಆರ್ಥಿಕ ಸಮಂಜಸತೆ ಮತ್ತು ಲಾಭದಾಯಕತೆಯನ್ನು ಪರಿಶೀಲಿಸಿ ಸಾಲ ಮಂಜೂರು ಮಾಡಲು ಕಳಿಸಲಾಗುತ್ತದೆ. ಜಿಲ್ಲಾ ಸಮಿತಿಯು ಬ್ಯಾಂಕಿನಿಂದ ಬಂದ ಪ್ರಸ್ತಾವನೆಯನ್ನು ಮಂಜೂರು ಮಾಡಿ ನಿಗಮಕ್ಕೆ ಮಾರ್ಜಿನ್ ಹಣ ಹಾಗೂ ಸಹಾಯ ಧಾನ ಬಿಡುಗಡೆ ಮಾಡಲು ಶಿಫಾರಸ್ಸು ಮಾಡುತ್ತಾರೆ ಮಾರ್ಜಿನ್ ಹಣದ ಸಾಲಕ್ಕೆ ಶೇಕಡ 7 ರಂತೆ ಬಡ್ಡಿಯನ್ನು ವಿಧಿಸಲಾಗುತ್ತದೆ. ಇದು ಸಹಾಯಧನ ಅಲ್ಲ ಬ್ಯಾಂಕಗಳಿಂದ ಮಂಜೂರಾದ ಸಾಲದ ಮೊತ್ತಕೆ ಚಾಲ್ತಿಯಲ್ಲಿರುವ ಬಡ್ಡಿದರವನ್ನು ವಿಧಿಸುತ್ತಾರೆ.

ಈ ಕೆಳಕಂಡಂತೆ ಮಾರ್ಜಿನ್ ಹಣವನ್ನು ಹಾಗೂ ಸಹಾಯಧನವನ್ನು ನಿಗಮದಿಂದ ಬಿಡುಗಡೆ ಮಾಡಲಾಗುವುದು. ಹಣ ಕಾಸು ಸಂಸ್ಥೆಗಳು ತಮ್ಮ ಸಾಲದೊಂದಿಗೆ ನಿಗಮದಿಂದ ಬಿಡುಗಡೆ ಮಾಡಿದ ಮಾರ್ಜಿನ್ ಹಣವನ್ನು ಹಾಗೂ ಸಹಾಧನವನ್ನು ಫಲಾನಿಭವಿಗಳಿಗೆ ಬಿಡುಗಡೆ ಮಾಡುತ್ತವೆ. ಹಣಕಾಸು ಸಂಸ್ಥೆಗಳು ತಮ್ಮ ಭಾಗ ಸಾಲದೊಂದಿಗೆ ಮಾರ್ಜಿನ್ ಹಣವನ್ನು ಸಹ ನಿಗಿಪಡಿಸಿದ ಕಂತುಗಳಲ್ಲಿ ಪಡೆದು ಆಯಾ ಹಣಕಾಸು ಸಂಸ್ಥೆಯ

Generated by Foxit PDF Creator © Foxit Software
http://www.foxitsoftware.com For evaluation only.

ಶಾಖೆಗಳು ವಸೂಲಿ ಮಾಡಿ ನಿಗಮದ ಪಾಲಿನ ಶೇಕಡ 7ರ ಬಡ್ಡಿಯೊಂದಿಗೆ ನಿಗಮಕ್ಕೆ ಕಳುಹಿಸಿಕೊಡುತ್ತವೆ. (ಅವಶ್ಯಕತೆ ಇದ್ದಂತಹ ಸಂದರ್ಭದಲ್ಲಿ ಸರ್ಕಾರ/ ನಿಗಮವು ಮಾರ್ಪಡಿಸಲಾಗುತ್ತದೆ.)

| ಕ್ರಮ ಸಂಖ್ಯೆ | ಯೋಜನಾವೆಚ್ಚ | ನಿಗಮ ಪಾಲು ಮಾರ್ಜಿನ್ ಹಣ ಸಾಲ | ನಿಗಮದಿಂದ ಸಹಾಯಧನ | ಫಲಾನುಭವಿಯ ವಂತಿಕೆ | ಬ್ಯಾಂಕ್/ ಕೆ.ಎಸ್.ಎಫ್.ಸಿ ಸಹಕಾರಿ ಬ್ಯಾಕ್ ಕ್ರೆಡಿಟ್ ಸಹಕಾರ ಸಂಘಗಳ ಪಾಲಿನ ಸಾಲ |
|---|---|---|---|---|---|
| 1 | ರೂ 25,000/- ಗಳವರೆಗೆ | ಇಲ್ಲ | ಶೇ 50 ರಷ್ಟು ಗರಿಷ್ಠ ರೂ. 5,000/- | ಇಲ್ಲ | ಶೇ 50 ಗರಿಷ್ಠ ರೂ. 20,000/- |
| 2 | ರೂ. 25,001/- ರೂ. 50,000/- ಗಳವರೆಗೆ | ಶೇ 20 ಗರಿಷ್ಠ ರೂ. 10,000/- | ಗರಿಷ್ಠ ರೂ.5,000/- | ಶೇ 5 ರಷ್ಟು ಗರಿಷ್ಠ | ಉಳಿಕೆ ಮೊತ್ತ ರೂ.32,500/- ಗಳವರೆ |
| 3 | ರೂ. 50,001/- ರೂ.1,00,000/- | ಶೇ. 20 ರೂ. 10,000/- ಗಳಿಂದ ರೂ. 20,000/- ಗಳವರೆಗೆ | ಗರಿಷ್ಠ ರೂ.5,000/- | ಶೇ. 5 ರಷ್ಟು ಕನಿಷ್ಟರೂ.2,500/- ಗರಿಷ್ಟರೂ.5,000/- ಗಳವರೆಗೆ | ಉಳಿಕೆ ಮೊತ್ತ 32,500/- ಗಳಿಂದ ಗರಿಷ್ಟರೂ.70,000/- ಗಳವರೆಗೆ |

## 2) ಶ್ರಮ ಶಕ್ತಿ:

ಈ ಯೋಜಯಿಡಿ ಅಲ್ಪಸಂಖ್ಯಾತರ ಗ್ರಾಮೀಣಕುಶಲಕರ್ಮಿಗಳ ಹಾಗೂ ವೃತ್ತಿಕುಲಕಸುಬುದಾರರ ಕುಶಲತೆ ಹಾಗೂ ತಂತ್ರಜ್ಞಾನವನ್ನು ಉತ್ತಮ ಪಡಿಸಿಕೊಳ್ಳು ತರಬೇತಿಯನ್ನು ಹಾಗೂ ಸ್ವಂತ ಉದ್ದಿಮೆಯನ್ನು ಕೈಗೊಳ್ಳಲು ರೂ.25,000/- ಗಳ ಸಾಲ ಸೌಲಭ್ಯವನ್ನು ಕಲ್ಪಿಸಲಾಗುತ್ತದೆ. 25,000/- ರೂಗಳಲ್ಲಿ ಶೇಕಡ 75 ರಷ್ಟು ಸಾಲ ಎಂದು ಮತ್ತು 25ರಷ್ಟು ಬ್ಯಾಕ್ ಎಂಡ್ ಸಹಾಧನ ಎಂದು ಪರಿಗಣಿಸಲಾಗುತ್ತದೆ, ನಿಗಮದಿಂದ ಬಿಡುಗಡೆ ಮಾಡಿದ ಸಾಲಕ್ಕೆ ಶೇಕಡ 4ರ ಬಡ್ಡಿದರದಲ್ಲಿ ಮರುಪಾವತಿ ಪಡೆಯಲಾಗುತ್ತದೆ.

**ಸಾಲ ಮಂಜೂರಾತಿ ವಿಧಾನ:**

ಸಾಲ ಪಡೆಯಲು ಬಯಸುವ ಅಲ್ಪಸಂಖ್ಯಾತರ ಅರ್ಜಿದಾರರು ನಿಗಮವು ನಿಗದಿ ಪಡಿಸಿದ ಸಾಲದ ಅರ್ಜಿಗಳನ್ನು ಆಯಾ ಜಿಲ್ಲಾ ವ್ಯವಸ್ಥಾಪಕರ ಕಛೇರಿಯಿಂದ ಪಡೆದು ಪೂರ್ಣ ವಿವರಗಳೊಂದಿಗೆ ಅರ್ಜಿ ಭರ್ತಿ ಮಾಡಿ, ಜಾತಿ ಮತ್ತು ಅದಾಯ ಧೃಡೀಕರಣ ಪತ್ರ, ಯೋಜನಾವರದಿ ಮತ್ತು ವಾಸುಸ್ಥಳದ ಬಗ್ಗೆ ಅರ್ಜಿಯಲ್ಲಿ ತಿಳಿಸಿರುವಂತೆ ಲಗತ್ತಿಸಿ ಸದರೀ ಕಛೇರಿಗೆ ಸಲ್ಲಿಸಬೇಕು. ಈ ಅರ್ಜಿಗಳನ್ನು ಪರಿಶೀಲಿಸಿ ಫಲಾನುಭವಿಯ ವಾಸುಸ್ಥಳದಲ್ಲಿ ಬರುವ ಬ್ಯಾಂಕ್/ಹಣಕಾಸು ಸಂಸ್ಥೆ/ ಸಹಕಾರ ಸಂಘಗಳಿಗೆ ಅರ್ಜಿಗಳನ್ನು ಸಾಲ ಮಂಜೂರಾತಿಗೆ ಶಿಫಾರಸ್ಸು ಮಾಡಲಾಗುತ್ತದೆ. ಬ್ಯಾಂಕ್/ಹಣ ಕಾಸು ಸಂಸ್ಥೆಗಳು ಮಂಜೂರಾತಿ ಮಾಡಿ ಪ್ರಸ್ತಾವನೆ ಕಳುಹಿಸಿದ ನಂತರ, ಜಿಲ್ಲಾ ಸಮಿತಿಯ ಅನುಮೊದನೆ ಪಡೆದುಕೊಂಡ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ಕಳುಹಿಸಿದ ಪ್ರಸ್ತಾವನೆಗಳನ್ನು ಪರಿಗಣಿಸಿ ಮಾರ್ಜಿನ್ ಹಣ/ ಸಹಾಯಧನ ಸಾಲವನ್ನು ಮಂಜೂರು

Generated by Foxit PDF Creator © Foxit Software
http://www.foxitsoftware.com For evaluation only.

ಮಾಡಲಾಗುತ್ತದೆ. ಅಲ್ಪಸಂಖ್ಯಾತರ ಜನರಿಗೆ ಹಾಗೂ ಸಂಘ ಸಂಸ್ಥೆಯ ಸದಸ್ಯರಿಗೆ ಕೈಗಾರಿಕೆ ಸೇವೆಗಳು ವ್ಯಾಪಾರ ಹೈನುಗಾರಿಕೆ ವ್ಯವಸಾಯ ಮತ್ತು ಇತರ ಯೋಜನೆ ಗಳಿಗೆನಿಗಮದಿಂದ ಸಾಲ ಮಂಜೂರು ಮಾಡಲಾಗುತ್ತದೆ.

### 3) ಸಹಕಾರ ಸಂಘಗಳ ಮುಖಾಂತರ ಸಾಲ ನೀಡಿಕೆ:

ಸಹಕಾರ ಸಂಘಗಳ ಕಾಯಿದೆ 1959ರ ಮುಖಾಂತರ ನೊಂದಾಯಿಸಲಪಟ್ಟು ಅಲ್ಪಸಂಖ್ಯಾತರ ವರ್ಗಗಳ ಏಳಿಗೆಗಾಗಿ ಕಾರ್ಯ ನಿರ್ವಹಿಸುತ್ತಿರುವ, ಲಾಭದಲ್ಲಿರುವ ಮತ್ತು ಸದಸ್ಯರಿಗೆ ನೀಡಲು ಸಾಕಷ್ಟು ಹಣಕಾಸು ಬೆಂಬಲವಿರುವ ಸಹಕಾರ ಸಂಘಗಳ ಮುಖಾಂತರ ನಿಗಮವು ಸಾಲದ ಯೋಜನೆಗಳನಗನು ಅನುಷ್ಠಾನಗೊಳಿಸುವ ಅವಕಾಶವನ್ನು ಮಾಡಿ ಕೊಂಡಿದೆ. ಈ ಸೌಲಭ್ಯವನ್ನ ಪಡೆಯಲಿಚ್ಛಿಸುವ ಸಹಕಾರ ಸಂಘಗಳು ನಿಗಮಕ್ಕೆ ಈ ಕೆಳಕಂಡ ದಾಖಲಾತಿಗಳನ್ನು ಒದಗಿಸಬೇಗಾಗಿರುತ್ತದೆ:

1. ಸಂಘದ ನೋಂದಣಿಪ್ರತಿ
2. ಕಳೆದ 3ವರ್ಷ ವಾರ್ಷಿಕ ಲಕ್ಕ ತಪಾಸಣಾ ವರದಿ ಸ್ಥಿತಿವವರಣಾ, ಪಟ್ಟಿ ಲಾಭ-ನಷ್ಠದ ತ:ಖ್ತೆ ಮತ್ತು ಆದಾಯ ಖರ್ಚುಗಳ ತ:ಖ್ತೆ.
3. ಪ್ರತಿಕೂಲ ಆಡಿಟ್ ಆಕ್ಷೇಪಣೆ ಇಲ್ಲದಿರುವ ಬಗ್ಗೆ ಸಂಬಂಧಿಸಿದ ಇಲಾಖಾ ಅಧಿಕಾರಿಯಿಂದ ದಾಳಲಾತಿ ಪತ್ರ.
4. ಸಹಕಾರ ಸಂಘದ ಬೈಲಾಸ್ ಮತ್ತು ರಾಜ್ಯಮಟ್ಟದ ನಿಗಮ ಮತ್ತು ಹಣಕಾಸು ಸಂಸ್ಥೆಗಳಿಂದ ಹಣ ಪಡೆಯುವ ಬಗ್ಗೆ ಅವಕಾಶಮಾಡಿಕೊಂಡಿರುವ ವಿವರ.
5. ನಿಗಮದಿಂದ ಸಾಲ ಪಡೆಯಲು ಸಂಘದ ಸದಸ್ಯರು ಮಾಡಿರುವ ಸರ್ವಾನುಮತದ ನಿರ್ಣಯದ ಪ್ರತಿ ಹಾಗ ೂ ಸಾಲ ಮತ್ತು ಬಡ್ಡಿಯನ್ನು ವಸೂಲು ಮಾಡಿ ನಿಗಮಕ್ಕೆ ಸಲ್ಲಿಸಿವ ಬಗ್ಗೆ ಕರಾರು ಪತ್ರ.
6. ನಿಗಮವು ನೀಡುವ ಮಾರ್ಜಿನ್ ಹಣ ಸೇರಿಸಿ ಫಲಾನುಭವಿಗಳಿಗೆ ವಿತರಿಸುವ ಬಗ್ಗೆ ಖಾತ್ರಿಪತ್ರ ಮತ್ತು ಇನ್ನಿತರ ಅಗತ್ಯ ಮಾಹಿತಿಗಳನ್ನು ಒದಗಿಸಿಬೇಕು.

### 4) ಅರಿವು ಯೋಜನೆ:

ಈ ಯೋಜನೆ ಅಡಿಯಲ್ಲಿ ವೃತ್ತಿ ನಿರತ ವಿಧ್ಯಭ್ಯಾಸಕ್ಕಾಗಿ ಅಂದರೆ ಎಂ.ಬಿ.ಬಿ.ಎಸ್, ಇಂಜನಿರಿಂಗ್, ಡಿ.ಎಡ್., ಐಟಿಐ,ಡಿಪ್ಲೋಮಾ, ನರ್ಸಿಂಗ್, ಎಂಬಿಎ, ಎಂಸಿಎ, ಬಿಡಿಎಸ್ ಇತ್ಯಾದಿ ವಿಧ್ಯಾಭ್ಯಾಸಕ್ಕಾಗಿ ಅಭ್ಯರ್ಥಿಗಳಿಗೆ ರೂ.75,000/- ದವರೆಗೆ ನಿಗಮದಿಂದ ಸಾಲ ಸೌಲಭ್ಯವನ್ನು ಕಲ್ಪಿಸುವ ಉದ್ದೇಶ ಹೊಂದಿದೆ ಇದಕ್ಕೆ ವಾರ್ಷಿಕವಾಗಿ ಶೇಕಡಾ 2 ರಂತೆ ಬಡ್ಡಿ ವಿಧಿಸಲಾಗುತ್ತದೆ ಹಾಗೂ ವ್ಯಾಸಂಗ ಮುಗಿಸಿದ ಒಂದು ವರ್ಷದ ನಂತರ ಫಲಾನುಭವಿಯು ನಿಗಮಕ್ಕೆ ಮರುಪಾವತಿಯನ್ನು ಮಾಡಬೇಕಾಗಿದೆ. ಹೆಚ್ಚಿನ ಮಾಹಿತಿಯನ್ನು ಆಯಾ ಜಿಲ್ಲಾ ಕಛೇರಿಯಿಂದ ಪಡೆಯಬಹುದು.

### 5) ಗಂಗಾ ಕಲ್ಯಾಣ ನೀರಾವರಿ ಯೋಜನೆ:

**(ಸಮೂಹಿಕ ನೀರಾವರಿ ಯೋಜನೆ)**

ರಾಜ್ಯದಲ್ಲಿ ಶಾಶ್ವತವಾಗಿ ಜಲ ಸಂಪ್ಮೂಲಗಳನ್ನು (ನದಿಗಳು) ಬಳಸಿಕೊಂಡು ಪೈಪ್‌ಲೈನ್ ಮುಖಾಂತರ ಏತ ನೀರಾವರಿ ಯೋಜನೆ ಮೂಲಕ ಜಮೀನಿಗೆ ಸಾಮೂಹಿಕ ನೀರಾವರಿ ಸೌಲಭ್ಯ ಒದಗಿಸಲಾಗುವುದು ಮತ್ತು ಎಲ್ಲಿ ಶಾಶ್ವತ ಜಲ ಸಂಪ್ಮೂಲಗಳು ಲಭ್ಯವಿಲ್ಲವೋ ಅಂತಹ ಕಡೆಗಳಲ್ಲಿ ತಜ್ಞ ಭೂ ವಿಜ್ಞಾನಿಗಳಿಂದ ಜಲಬಂದುಗಳನ್ನು

Generated by Foxit PDF Creator © Foxit Software
http://www.foxitsoftware.com For evaluation only.

ಗುರುತಿಸಿ ಕೊಳವೆ ಬಾವಿಗಳನ್ನು ಕೊರೆಯಿಸಲಾಗುವುದಲ್ಲದೆ, ವಿದ್ಯುಚ್ಛಕ್ತಿ ಪೈಪುಗಳ ಅಳವಡಿಕೆ, ನೀರು ಸಂಗ್ರಹಣೆಗೆ ಟ್ಯಾಂಕ್ ನಿರ್ಮಾಣ ಮಾಡಿಕೊಡಲಾಗುವುದು. ಈ ಯೋಜನೆಯನ್ನು ಕಾರ್ಯಗತಗೊಳಿಸಿದಂದಿನಿಂದ 5 ವರ್ಷಗಳ ಕಾಲ ನಿಗಮ ವಚ್ಚದಲ್ಲಿಯೇ ನಿರ್ವಹಣೆ ಮಾಡಿ, ನಂತರ ಫಲಾನುಭವಿಗಳ ಜನ ಬಳಕೆದಾರರ ಸಂಘಕ್ಕೆ ವಹಿಸಿಕೊಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕಛೇರಿಯನ್ನು ಸಂಪರ್ಕಿಸಬಹುದು.

**ಯೋಜನೆಯ ಮುಖ್ಯಾಂಶಗಳು (ಸಾಮೂಹಿಕ ನೀಋುಆವರಿ ಯೋಜನೆ) :**

1. ಸೌಲಭ್ಯ ಪಡೆಯುವ ಫಲಾನುಭವಿಗಳು ಸರ್ಕಾರಿ ಆದೇಶದ ಪ್ರಕಾರ ಅಲ್ಪಸಂಖ್ಯಾತ ವರ್ಗಗಳಿಗೆ ಸೇರಿದವರಾಗಿರಬೇಕೆ.
2. ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು,
3. ಸಣ್ಣ ಮತ್ತು ಅತೀ ಸಣ್ಣ ರೈತರಾಗಿಬೇಕು.
4. ಕುಟುಂಬ ವಾರ್ಷಿಕ ವರಮಾನವು 22,000/- ರೂ ಗಳನ್ನು ಮೀರಿರಬಾರದು.
5. ವ್ಯವಸಾಯ ವೃತ್ತಿಯನ್ನೇ ಅವಲಂಬಿಸಬೇಕು, ಹಾಗೂ ಬೇರೆ ಯಾವುದೇ ತರಹದ ನೀರಾವರಿ ಸೌಲಭ್ಯ ಹೊಂದಿರಬಾರದು.

ಇಳುವರಿ ಪಡೆಯಲು ಕೃಷಿ ಪರಣಿತರ ಸಲಹೆ ಮತ್ತು ಸಹಾಯಗಳನ್ನು ಪಡೆದುಕೊಳ್ಳುವ ವ್ಯವಸ್ಥೆ ಒದಗಿ ಸಲಾಗುವುದು. ಈ ಯೋಜನೆಯನ್ನು ಸರಿಯಾಗಿ ನಿರ್ವಹಣೆಯನ್ನು ಸುಗಮವಾಗಿ ನೋಡಿಕೊಂಡು ಹೋಗಳು ಅನುಕೂಲವಾಗುವಂತೆ ಪ್ರೇರಕರನ್ನು ನೇಮಿಸಲಾಗುವುದು. ಈ ಯೋಜನೆಯು ಸಂಪೂರ್ಣವಾಗಿ ಯೋಜನೆಯಾಗಿ ರುತ್ತದೆ.

**ವೈಯಕ್ತಿಕ ಕೊಳವೆ ಭಾವಿ ಯೋಜನೆ:**

ಸಂಬಂಧಪಟ್ಟ ಜಿಲ್ಲಾ ಸಮಿತಿಯಿಂದ ಅಧಿಕಾರಿಗಳ ಕಛೇರಿಯಿಂದ ಆಯ್ಕೆಗೊಂಡ 2 ರಿಂದ 5 ಎಕರೆ ಜಮೀನು ಹೊಂದಿರುವಂತಹ ಫಲಾನುಭವಿಗಳಿಗೆ ಒಂದು ಕೊಳವೆ ಬಾವಿಯನ್ನು ಕೊರೆದು ಪಂಪ್ ಸೆಟ್‌ನ್ನು ಸರಬರಾಜು ಮಾಡಲಾಗುವುದು ಸರ್ಕಾರದ ಆದೇಶದ ಪ್ರಕಾರ ಒಟ್ಟು ಮೊತ್ತ ರೂ. 1.00 ಲಕ್ಷಗಳು ಮಿರಬಾರದು. ವಿದ್ಯುಧ್ದೀಕರಣ ಮತ್ತು ಇತರೆ ವೆಚ್ಚಗಳನ್ನು ಫಲಾನಭವಿಗಳೇ ಭರಿಸಬೇಕು.

6. ಕನಿಷ್ಟ 3 ರ ರಿಂದ 5 ಜನ ರೈತರುಗಳು ಸೇರಿ ಒಂದೇ ಕಡೆ 8 ಎಕರೆ ಜಮೀನಿಗೆ 2 ಕೊಳವೆ ಬಾವಿ ಹಾಗೂ 15 ಎಕರೆ ಜಮೀನಿಗೆ 3 ಕೊಳವೆ ಬಾವಿಗಳನ್ನು ಕೊರೆದು ಪಂಪ್‌ಸೆಟ್ ಅಳವಡಿಸಿ ನೀರಾವರಿ ಸೌಲಭ್ಯ ಒದಗಿ ಸಲಾಗುವುದು.
7. ಗಂಗಾ ಕಲ್ಯಾಣ ಯೋಜನೆಯ ಘಟಕ ವಚ್ಚಕ್ಕೆ ಒಳಪಟ್ಟ ಹಾಗೂ ನೀರಾವರಿ ಇಲಾಖೆಯ ಪೂರ್ವಾನುಮತಿ ಪಡೆದು ಸಾಮೂಹಿಕ ಏತ ನೀರಾವರಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು.

## 6) ಭೂ ಖರೀದಿ ಯೋಜನೆ:

ಈ ಯೋಜನೆಯಡಿಯಲ್ಲಿ ಜಮೀನು ಇಲ್ಲದಿರುವಂತಹ ಅಲ್ಪಸಂಖ್ಯಾತರ ರೈತರುಗಳಿಗೆ 02 ಎಕರೆ ತರೀ ಜಮೀನನ್ನು ಅಥವಾ 01 ಎಕರೆ ಖುಷ್ಕಿ ಜಮೀನನ್ನು ನೀಡಲಾಗುತ್ತದೆ. ಪ್ರತಿ ಎಕರೆ ಜಮೀನಿಗೆ ರೂ. 30,000/- ಗಳ

Generated by Foxit PDF Creator © Foxit Software
http://www.foxitsoftware.com For evaluation only.

ವರೆವಿಗೆ ಖರೀದಿಸಿ ಸಾಲದ ರೂಪದಲ್ಲಿ ಮತೀಯ ಅಲ್ಪಸಂಖ್ಯಾತರ ಭೂ ರಹಿತ ರೈತರುಗಳಿಗೆ ಶೇಕಡ 50 ರಷ್ಟು ಸಾಲ ಹಾಗೂ ಶೇಕಡ 50 ರಷ್ಟು ಸಹಾಯಧನವ ನೀಡಲಾಗುತ್ತಿದೆ.

### 7) ಮೈಕ್ರೋ ಫೈನಾನ್ಸ್ ಯೋಜನೆ:

ಈ ಯೋಜನೆಯಡಿಯಲ್ಲಿ ನಗರ ಪ್ರದೇಶದಲ್ಲಿ ಮತ್ತುಂ ಗ್ರಾಮಗಳಲ್ಲಿ ವಾಸಿಸುವ ಮತೀಯ ಅಲ್ಪಸಂಖ್ಯಾತರ ಸಾಮಾನ್ಯವಾಗಿ ಅನಕ್ಷರಸ್ಥರಾಗಿದ್ದು, ಅಂತಹ ಅಲ್ಪಸಂಖ್ಯಾತ ಜನರು, ತಳ್ಳು ಗಾಡಿಯಲ್ಲಿ ತರಕಾರಿ/ ಹಣ್ಣ ವ್ಯಾಪಾರ, ಕಲಾಯಿ ಮಾಡುವಿಕೆ, ಹಾಸಿಗೆ ಮಾಡುವಿಕೆ, ಪಾನ್ ಶಾಪ್, ಕಡಲೆಕಾಯಿ ವ್ಯಾಪಾರ ಸೈಕಲ್ ರಿಪೇರಿ, ಗ್ಯಾಸ್/ಆರ್ಕ್ ವೆಲ್ಡಿಂಗ್, ವಲ್ಕನೈಸಿಂಗ್ ಮೀನು ಮಾರಾಡ, ಟೀ ಶಾಪ್ ಮುಂತಾದ ಸಣ್ಣ ವ್ಯಾಪಾರವನ್ನು ಮಾಡುತ್ತಿದ್ದಾರೆ. ಇಂತಹ ಬಡ ಜನರಿಗೆ ಅವರ ವ್ಯಾಪಾರ ಸುಧಾರಿಸಲು ಹಾಗೂ ಅವರು ನಿರಂತರ ಅದಾಯ ಪಡೆಯಲು ಅನುಕೂಲವಾಗುವಂತೆ ಶೇಕಡ 5ರ ಬಡ್ಡಿ ದರದ್ಲಲಿ ರೂ. 10,000/- ಗಳ ಸಾಲವನ್ನು ನೀಡಲು ನಿಗಮವು ಉದ್ದೇಶಿಸಿದೆ. ಈ ಯೋಜನೆಯಡಿಯಲ್ಲ ಘಟಕ ವಚ್ಚದ ಶೇಕಡ 50 ರಷ್ಟು ಅಥವಾ ಗರಷ್ಟ ರೂ. 2,500/-ಗಳ ಸಹಾಯಧನವನ್ನು (ಬ್ಯಾಕ್ ಎಂಡ್ ಸಬ್ಸಿಡಿ) ಬಿಡುಗಡೆ ಮಾಡಲಾಗುತ್ತದೆ.

### 8) ರಾಷ್ಟ್ರೀಯ ಅಲ್ಪಸಂಖ್ಯಾತರ ಅಭಿವೃದ್ಧಿ ಮತ್ತು ಹಣಕಾಸು ನಿಗಮ ಸಾಲದ ಯೋಜನೆಗಳು.

ರಾಷ್ಟ್ರೀಯ ಅಲ್ಪಸಂಖ್ಯಾತರ ಅಭಿವೃದ್ಧಿ ಮತ್ತು ಹಣಕಾಸು ನಿಗಮವನ್ನು 1994 ರತ್ತಿ ರಾಷ್ಟ್ರ ಮಟ್ಟದಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಸ್ಥಾಪನೆಯಾಗಿರುತ್ತದೆ. ರಾಷ್ಟ್ರೀಯ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು ಅಲ್ಲ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು ಇದರ ಅಧಿಕೃತ ಸಂಸ್ಥೆಯಾಗಿರುತ್ತದೆ. ರಾಷ್ಟ್ರೀಯ ಅಲ್ಪ ಮಾರ್ಜಿನ್ ಹಣ ಹಾಗೂ ಅವಧಿ ಸಾಲದ ಯೊಜನೆಗಳಿಗೆ ಹಣವನ್ನು ಸಾಲದ ರೂಪದಲ್ಲಿ ಬಿಡುಗಡೆ ಮಾಡುತ್ತಾರೆ. ಮಾರ್ಜಿನ್ ಹಣ ಸಾಲದಲ್ಲಿ ರಾಷ್ಟ್ರೀಯ ಅಲ್ಪಸಮಕ್ಯಾತರ ಅಭಿವೃದ್ಧಿ ನಿಗಮದಿಂದ ಘಟಕ ವಚ್ಚ ಶೇಖಡ 25ಎಷ್ಟು ರಾಜ್ಯ ನಿಗಮದಿಂದ ಶೇಕಡ 10ರಷ್ಟು ಮತ್ತು ಬ್ಯಾಂಕ್/ ಕೆ.ಎಸ್.ಎಫ್.ಸಿ.ಯಿಂದ ಶೇಕಡ 60ರಷ್ಟು ಸಾಲ ಬಿಡುಗಡೆ ಮಾಡಲಾಗುತ್ತದೆ. ಹಾಗೂ ಶೇಕಡ 5ರಷ್ಟುನ್ನು ಫಲಾನುಭಾವಿಗಳೇ ಭರಿಸಬೇಕಾಗುತ್ತದೆ. ಅವಧಿ ಸಾಲದಲ್ಲಿ ರಾಷ್ಟ್ರೀಯ ನಿಗಮದಿಂದ ಘಟಕದ ವೆಚ್ಚ ಶೇಕಡ 85 ರಷ್ಟು ರಾಜ್ಯ ನಿಗಮದಿಂದ ಶೇಕಡ 10ರಷ್ಟು ಹಾಗೂ ಫಲಾನಿಭವಿಯ ವಂತಿಗೆ ಶೇಕಡ 5ರಷ್ಟು ಇರುತ್ತದೆ.

**ತರಬೇತಿ ಕಾರ್ಯಕ್ರಮ:-**

ರಾಷ್ಟ್ರೀಯ ಅಲ್ಪಸಂಖ್ಯಾತರ ಅಭಿವೃದ್ಧಿ ಮತ್ತು ಹಣಕಾಸು ನಿಗಮ, ನವದೆಹಲಿ, ರವರವೃತ್ತಿ ತರಬೇತಿ ಯೋಜನೆಯಡಿಯಲ್ಲಿ ವದ್ಯಾವಂತೆ ಯುವಕ ಯುವತಿಯರಿಗೆ ಸ್ವುಉದ್ಯೋಗ ಕೈಗೊಳ್ಳುವ ಅಥವಾ ಉತ್ತಮ ಉದ್ಯೋಗವಾಕಾಶವನ್ನು ಹೊಂದುವ ಸಲುವಾಗಿ ಸರ್ಕಾರದಿಂದ ಮಾನ್ಯತೆ ಪಡೆದ ತರಬೇತಿ ಸಂಸ್ಥೆಗಳಿಂದ ಕೆಳಕಂಡ ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ.

| ಕ್ರಮ ಸಂಖ್ಯೆ | ತರಬೇತಿ ಹೆಸರು | ತರಬೇತಿ ಅವಧಿ |
|---|---|---|
| 1 | ಕಾಲ್ ಸೆಂಟರ್ ತರಬೇತಿ | 6 ತಿಂಗಳು |
| 2 | ವಬ್ ಟೆಕ್ನಾಲಜಿ ತರಬೇತಿ | 6 ತಿಂಗಳು |

Generated by Foxit PDF Creator © Foxit Software
http://www.foxitsoftware.com For evaluation only.

| | | |
|---|---|---|
| 3 | ಕಂಪ್ಯೂಟರ್ ತರಬೇತಿ | 6 ತಿಂಗಳು |
| 4 | ಫ್ಯಾಶನ್ ಟೆಕ್ನಾಲಜಿ | 6 ತಿಂಗಳು |
| 5 | ಜರ್ದೋಸಿ/ಕಶಿದಾ ಮತ್ತು ಎಂಬ್ರಾಯಿಡರಿ | 6 ತಿಂಗಳು |

ಸೂಚನೆ:-ಕ್ರಮ ಸಂಖ್ಯೆ 4 ಮತ್ತು 5 ರಲ್ಲಿ ತೊರಿಸಿರುವ ತರಬೇತಿಗಳನ್ನೂ ಮಹಿಳಾ ಅಭಿವೃದ್ಧಿ ಯೋಜನೆಯಡಿಯಲ್ಲಿ ನಡೆಸಲಾಗುತ್ತದೆ.

## 9) ಸಣ್ಣ ಮತ್ತು ಅತೀ ಸಣ್ಣ ಸಾಲಗಳು (ಎನ್.ಎಂ.ಡಿಎಫ್.ಸಿ ಯೋಜನೆ):-

ರಾಷ್ಟ್ರೀಯ ಅಲ್ಪಸಂಖ್ಯಾತರ ಅಭಿವೃದ್ಧಿ ಮತು ಹಣಕಾಸು ನಿಗಮದವರು ರಾಜ್ಯದ ನಿಗಮದ ಮೂಲಕ ಸಣ್ಣ ಮತ್ತು ಅತೀ ಸಣ್ಣ ವ್ಯಾಪಾರ ವೃತ್ತಿಗಳಿಗೆ ರೂ.5000/- ಗಳಿಂದ ರೂ. 10,000/- ಗಳವರೆಗೆ ನೆರ ಸಾಲ ಸೌಲಭ್ಯವನ್ನು ಅಲ್ಪಸಂಖ್ಯಾತರ ಜನರುಗಳಿಗೆ ನೊಂದಾಯಿತ ಸಂಘ ಸಂಸ್ಥೆಗಳ ಮೂಲಕ ಸಾಲವನ್ನು ಒದಗಿಸಲಾಗುತ್ತದೆ, ಫಲಾನುಭವಿಗಳು ನೊಂದಾಯಿಉತ ಸಂಘ ಸಂಸ್ಥೆಗಳಲ್ಲಿ ನೊಂದಣಿ ಮಾಡಿರುವಂತಹರಿಗೆ ಈ ಸಾಲ ಸೌಲಭ್ಯವನ್ನು ಒದಗಿಸಲಾಗುತ್ತದೆ.

ಅ) ಅವಧಿ ಸಾಲಕ್ಕೆ ಶೇಕಡ 7ರ ಬಡ್ಡಿ ದರವನ್ನು ಹಾಗೂ ಸಾರಿಗೆ ವಾಹನಕ್ಕೆ ಶೇಕಡ 12ರ ಬಡ್ಡಿದರವಂತೆ ನಿಗಮವು ವಿಧಿಸುವುದು.

ಆ) ಸಣ್ಣ ಮತ್ತು ಅತೀ ಸಾಲಕ್ಕೆ ಶೇಕಡ 8ರ ಬಡ್ಡಿದರವನ್ನು ನಿಗಮವು ವಿಧಿಸುವುದು.

ಸಾಲ ಪಡೆಯುವ ವಿಧಾನ:

ರಾಷ್ಟ್ರೀಯ ನಿಗಮದವರು ಅನುಮೂದಿಸಿರುವ ಯೋಜನೆಗಳನ್ನು ಹಾಗೂ ನಿಗದಿಪಡಿಸಿದ ಗುರಿಗೆ ಅನುಗಣವಾಗಿ ಕೇಂದ್ರ ಕಛೇರಯಿಂದ ಎಲ್ಲಾ ಜಿಲ್ಲೆಗಳಿಗೂ ಗುರಿಯನ್ನು ನಿಗದಿಪಡಿಸಲಾಗುತ್ತದೆ. ನಿಗದಿಪಡಿಸಿದ ಗುರಿಗೆ ಅನುಗಣವಾಗಿ ವ್ಯಾಪಕ ಪ್ರಚಾರ ನೀಡಿ ಜಿಲ್ಲಾ ವ್ಯವಸ್ಥಾಪಕರು ದಿನಪತ್ರಿಕೆಗಳಲ್ಲಿ ಅರ್ಜಿಯನನು ಅಹ್ವಾನಿಸುತ್ತಾರೆ. ಫಲಾನುಭವಿಗಳು ನಿಗದಿ ಪಡಿಸಿದ ಅರ್ಜಿಯೊದಿಗೆ ಜಾತಿ ಮತ್ತು ಅದಾಯ ಪ್ರಮಾಣ ಪತ್ರ , ಪಡಿತರ ಚೀಟಿ ನಕಲು, ಭಾವ ಚಿತ್ರ ಹಾಗೂ ಪ್ರಾಜೆಕ್ಟ್ ವರದಿ ಜೊತೆಗೆ ಅಯಾ ಜಿಲ್ಲೆಯಲ್ಲಿ ರಾಷ್ಟ್ರೀಯ ನಿಗಮ ಅನುಮೂದಿಸಿದ ಯೋಜೆನಗೆ ಅರ್ಜಿಯನ್ನು ಹಾಕತಕ್ಕದ್ದು. ಜಿಲ್ಲಾ ಸಮಿತಿಯಿಂದ ಫಲಾನುಭವಿಗಳನ್ನು ಆಯ್ಕೆ ಮಾಡಿ ಕೇಂದ್ರ ಕಛೇರಿಯಿಂದ ನಿಗದಿ ಪಡಿಸಿದ ಇತರೆ ದಾಖಲಾತಿಗಳನ್ನು ಸಲ್ಲಿಸುವಂತೆ ಜಿಲ್ಲಾ ವ್ಯಾವಸ್ಥಾಪಕರು, ಆಯ್ಕೆಯಾದ ಫಲಾನಭವಿಗಳಿಗೆ ಸೂಚನೆಯನ್ನು ನೀಡುತ್ತಾರೆ. ಅಯ್ಕೆಯಾದ ಫಲಾನುಭವಿಗಳು ತಮ್ಮ ದಾಖಲಾತಿಗಳನ್ನ ಜಿಲ್ಲಾ ಕಛೇರಿಗಳಿಗೆ ಸಲ್ಲಿಸಿದ ನಂತರ, ಜಿಲ್ಲಾ ವ್ಯಾವಸ್ಥಾಪಕರು ಕೇಂದ್ರ ಕಛೇರಿಗೆ ರವಾನಿಸಿ ಸಾಲ ಬಿಡುಗಡೆ ಮಾಡಲು ಅಯ್ಕೆ ಸಮಿತಿಯ ಶಿಫಾರಸ್ಸನೊಂದಿಗೆ ಪ್ರಸ್ತಾವನೆಯನ್ನು ಕಳುಹಿಸುತ್ತಾರೆ. ಕೇಂದ್ರ ಕಛೇರಿಯಿಂದ ಫಲಾನುಭವಿಗಳಿಗೆ ಯಂತ್ರೋಪಕರಣಗಳು ವಾಹನಗಳಿಗೆ ನೊಂದಾಯಿತ ಹಾಗೂ ಅಧಿಕೃತ ಪಡೆದ ಕಂಪನಿಗಳಿಗೆ ನೆರವಾಗಿ ಚೆಕ್ಕನ್ನು ರವಾನಿಸಿ ಯಂತ್ರೋಪಕರಣ ಹಾಗೂ ವಾಹನಗಳಿಗೆ ಸಾಲವನ್ನು ಬಿಡುಗಡೆ ಮಾಡಲಾಗುತ್ತದೆ.

ಅರ್ಹತೆ:

1) ಸೌಲಭ್ಯ ಪಡೆಯುವ ಫಲಾನುಭವಿಗಳು ಸರ್ಕಾರಿ ಆದೇಶದ ಪ್ರಕಾರ ಅಲ್ಪಸಂಖ್ಯಾತರ ವರ್ಗಗಳಿಗೆ ಸೇರಿದವರಾಗಿರಬೇಕು.
2) ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು

Generated by Foxit PDF Creator © Foxit Software
http://www.foxitsoftware.com For evaluation only.

3) ಕುಟುಂಬ ವಾರ್ಷಿಕ ವರಮಾನವು ಗ್ರಾಮಾಂತ್ರ ಫಲಾನುಭವಿಗಳಿಗೆ ರೂ. 31,952/- ಹಾಗೂ ನಗರ ಪ್ರದೇಶಗಳ ಫಲಾನುಭವಿಗೆ ರೂ.42,412/- ಮಿರಬಾರದು.

## 10) ಅಲ್ಪಸಂಖ್ಯಾತರ ಗುಂಪು ಅಭಿವೃಧ್ಧಿ ಕಾರ್ಯಕ್ರಮ:

2001ನೇ ಇಸ್ವಿ ಜನಗಣತಿ ಮೇಲೆ ಭಾರತ ಸರ್ಕಾರದ ಅಲ್ಪಸಂಖ್ಯಾತರ ಕಲ್ಯಾಣ ಸಚಿವಾಲಯವು ದೇಶದ 24 ರಾಜ್ಯಗಳಲ್ಲಿ ಅಲ್ಪಸಂಖ್ಯಾತರು ಹೆಚ್ಚಾಗಿ ನೆಲೆಸಿರುವ 338 ನಗರ ಪ್ರದೇಶಗಳನ್ನುಗುರುತಿಸಿ ಇಂತಹ ಪ್ರದೇಶಗಳನ್ನು ಮೈನೊರಿಟಿ ಕ್ಲಸ್ಟರ್ಸ್ ಎಂದು ಪರಿಗಣಿಸಿದೆ. ರಾಷ್ಟ್ರೀಯ ನಿಗಮದ ಕಾರ್ಯ ಚಟುವಟಿಕೆಗಳನ್ನು ತೀವ್ರಗೊಳಿಸಲು ಮತ್ತು ಕೇಂದ್ರೀಕೃತಗೊಳಿಸಲು 2008-09ನೇ ಸಾಲಿಗೆ 40 ಕ್ಲಸ್ಟರ್ಸ್‌ಗಳನ್ನು ಗರುತಿಸಲಾಗಿದೆ ಕರ್ನಾಟಕ ರಾಜ್ಯದಲ್ಲಿ ಧಾರವಾಡ, ಗುಲ್ಬರ್ಗಾ, ಮಂಗಳೂರು ಮತ್ತು ಬಳ್ಳಾರಿಯನ್ನು ಕ್ಲಸ್ಟರ್ಸ್‌ಯಂದು ಪರಿಗಣಿಸಿದೆ.

2008-09ನೇ ಸಾಲಿನಲ್ಲಿ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃಧ್ಧಿ ನಿಗಮವು ಪ್ರತಿ ಕ್ಲಸ್ಟರ್ಸ್‌ನಲ್ಲಿ ಕೆಳಕಂಡ ಕರ್ಯಚಟುವಟಿಕೆಗಳನ್ನು ಸಂಘಟಿಸುತ್ತಿದೆ.

1. ಜಾಗೃತಿ ಕಾರ್ಯಗಾರ (Awareness camp)
2. ಅವಧಿಸಾಲ (Term Loan)
3. ಸಣ್ಣ ಸಾಲ (Micro Finance)
4. ವೃತ್ತಿ ತರಬೇತಿ (Vocational Training)
5. ಇಡಿಪಿ ತರಬೇತಿ (EDP Training)
6. ಮಹಿಳಾ ಸಮವೃದ್ಧಿ ಯೋಜನೆ.
7. ಕಂಪ್ಯೂಟರ್ ಉಪಯುಕ್ತೆ ಕೋರ್ಸ್ (A course in computer application)

## 11) ಮಹಿಳಾ ಅಭಿವೃಧ್ಧಿ ಯೋಜನೆ:-

ಸಮಾಜದಲ್ಲಿ ಅತೀ ದುರ್ಬಲರಾಗಿರುವ ಅಲ್ಪಸಂಖ್ಯಾತರ ಮಹಿಳೆಯರನ್ನು ಸಬಲೀಕರಣಗೊಳಿಸುವ ದೃಷ್ಟಿಯಿಂದ ಅವರಿಗೆ ಹೆಚ್ಚಿನ ಒತ್ತು ಕೊಡಲಾಗುತ್ತಿದೆ ಇದಕ್ಕಾಗಿ ಕೆಳಕಂಡ ಕಾರ್ಯತಂತ್ರವನ್ನು ರೂಪಿಸಲಾಗಿದೆ.

1. ಅದಾಯ ಹೆಚ್ಚಿಸುವ ಕೌಶಲ್ಯ/ಕಾರ್ಯ ಚಟುವಟಿಕೆಗಳನ್ನು ಉತ್ತೇಜಿಸುವುದು
2. ಅಲ್ಪಸಂಖ್ಯಾತರ ಮಹಿಳೆಯರನ್ನು ಸ್ವ-ಸಹಾಯ ಸಂಘವನ್ನು ಮಾಡಿಕೊಳ್ಳುಲು ಉತ್ತೇಜಿಸುವುದು. ಮತ್ತು ಅಂತಹ ಸಂಘಕ್ಕೆ ಬೆಂಬಲ ನೀಡುವುದು
3. ಮಹಿಳಯರಿಗೆ ಸೂಕ್ತವಾಗುವ ಉತ್ಪಾದನಾ ಅಧಾರಿತ ಚಟುವಟಿಕೆಯನ್ನು ಕೈಗೊಳ್ಳಲು ಅನುಕೂಲ ಮಾಡಿಕೊಡುವುದು.

ಮೇಲ್ಕಂಡ ಚೌಕಟ್ಟಿನ ಅಧಾರದ ಮೇಲೆ ರಾಷ್ಟ್ರೀಯ ಅಲ್ಪಸಂಖ್ಯಾತರ ಅಭಿವೃಧ್ಧಿ ಮತ್ತು ಹಣಕಾಸು ನಿಗಮವು ಮಹಿಳಾ ಸಮವೃಧ್ಧಿ ಯೋಜನೆಯನ್ನು ಪರಿಚಿಯಿಸಿದ್ದು ತರಬೇತಿ ಪಡೆದ ಮಹಿಳೆಯರಿಗೆ ಮೈಕ್ರೋ ಸಾಲವನ್ನು ನೀಡುತ್ತದೆ. ತರಬೇತಿ ಅವಧಿಯಲ್ಲಿ ಈ ಮಹಿಳೆಯರ ಸ್ವ-ಸಹಾಯ ಸಂಘವನ್ನು ಮಾಡಿಕೊಳ್ಳಬೇಕು.

Generated by Foxit PDF Creator © Foxit Software
http://www.foxitsoftware.com For evaluation only.

ಅಲ್ಪಸಂಖ್ಯಾತರ ಮಹಿಳೆಯರನ್ನು ಕೈಗೊಳ್ಳಲುವ ಎಲ್ಲಾ ತರಹದ ವೃತ್ತಿಗಳು ಮತ್ತು ಚಟುವಟಿಕೆಗಳನ್ನು ಪರಿಗಣಿಸಲಾಗುವುದು. ಸಂಘದ ಪ್ರತಿ ಸದಸ್ಯರು ಪಡೆಯ ಬಯಸುವ ಮಕ್ರೋ ಸಾಲವನ್ನು ರೂ. 25,000/- ಕ್ಕೆ ಸೀಮಿತಗೊಳಿಸಲಾಗಿದೆ ಮತ್ತು ಇದಕ್ಕೆ ಇಳಿಸಿದ ದರದಲ್ಲಿ ಶೇಕಡ 4 ರಂತೆ ಬಡ್ಡಿಯನ್ನು ನೀಡಬೇಕಾಗುತ್ತದೆ.

## ಮಹಿಳೆಯರಿಗೆ ಅದ್ಯತೆ

ಸರ್ಕಾರದ ಆದೇಶದನ್ವಯ ನಿಗಮವು ಅನುಷ್ಠಾನಗೊಳಿಸುತ್ತಿರುವ ಸಾಲದ ಯೋಜನೆಗಳು ಸಹಾಯಧನ ಯೋಜೆನ ತರಬೇತಿಯಲ್ಲಿ ಶೇಕಡ 33 1/3 ರಷ್ಟು ಪ್ರಯೋಜನವನ್ನು ಮಹಿಳೆಯರಿಗೆ ದೊರಕಿಸಿಕೊಡಲು ಕಾರ್ಯಕ್ರಮ ರೂಪಿಸಲಾಗಿರುತ್ತದೆ.

## ಸೂಚನೆ

ಮತೀಯ ಅಲ್ಪಸಂಖ್ಯಾತರ ಜನರುಗಳ ಏಳಿಗೆಗಾಗಿ ಹಾಗೂ ಅಭಿವೃಧ್ಧಿಗಾಗಿ ಯೋಜನೆಗಳಲ್ಲಿ ಸೌಲಭ್ಯವನ್ನು ಪಡೆಯಬಯಸುವ ಅಲ್ಪಸಂಖ್ಯಾತರ ಜನರ ಅಯಾ ಜಿಲ್ಲಾ ಕಛೇರಿಯನ್ನು ಸಂಪರ್ಕಿಸಿಲು ಕೊರಲಾಗಿದೆ.